

# ಹೋಯ್ ಕುಂದಾಪ್ರದವ್ರ ಯಾವ ಬದಿಯವ್ರ್?

ಮಹಾಕವಿ ಕುವೆಂಪು ಅವರು 'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು..' ಎಂದು ಕನ್ನಡದ ಕಂಪನ್ನು ವರ್ಣಿಸಿದ್ದಾರೆ. ಈ ಸಾಲನ್ನು ನಾವು 'ಕುಂದಾಪ್ರ ಕನ್ನಡ ಕೇಳಿದೊಡನೆ ಇಲ್ಲಿನ ಜನರ ಮನ ಅರಳುವುದು' ಎಂದು ಅನ್ವರ್ಥವಾಗಿಸಬಹುದು. ಏಕೆಂದರೆ 'ಕುಂದಾಪ್ರ ಮಂದಿ'ಗೆ ಇಲ್ಲಿನ ಭಾಷೆ ಮೇಲಿರುವ ಪ್ರೀತಿ ಇದಕ್ಕೆ ಕಾರಣ. ಅಂದಹಾಗೆ ಅವಿಭಜಿತ ದಕ್ಷಿಣ ಕನ್ನಡದಿಂದ ಉಡುಪಿ ಜಿಲ್ಲೆಗೆ ಕುಂದಾಪುರ ಸೇರಿಕೊಂಡಿದೆ. ಕುಂದಾಪ್ರ ಕನ್ನಡವು ಕನ್ನಡ ಭಾಷೆಯ ಪ್ರಾದೇಶಿಕ ಉಪಭಾಷೆಯಾಗಿದ್ದು, ಇದನ್ನು 'ಕುಂದಾಪ್ರ ಭಾಷಿ, ಕುಂದಗನ್ನಡ' ಎನ್ನುವರು. ಯಕ್ಷಗಾನದ ಸೊಬಗು, ಮಲ್ಲಿಗೆಯ ಘಮಲು, ಭೋರ್ಗರೆಯುವ ಕಡಲು, ಮನಮೋಹಕ ಕರಾವಳಿ ತೀರಗುಂಟ ವಿಸ್ತರಿಸಿರುವ ಇಲ್ಲಿನ ಕನ್ನಡದ ಸವಿಯನ್ನು ರೂಪಾ ಕೆ.ಎಂ. ಉಣಬಡಿಸಿದ್ದಾರೆ.

ಅರೆ, ಅಸೋಡಿ ಶುರು ಆಯ್ತ್, ಎಂಥ ಗಾಳಿ!. ಇಪ್ಪು ನಾಲ್ಕ್ ಮರ್ಗಗಳು ಎಲ್ ಮೈ ಮೇಲ್ ಬೀಳುತ್ತೋ ಅಂದ್ಕಂಡೇ ಹೊರ್ಗ್ ಕಾಲಿಡ್ಕ್. ಅಲಾ, ಊರ್ ಮನಿ ಕಣಂಗೆ ಈ ಬೆಂಗಳೂರಲ್ಲೇನ್ ಕಾನ್ ಆಯ್ಲಿ, ಹಾಡಿ ಆಯ್ಲಿ ಇತ್ತಾ!. ಇಪ್ಪುದು ನಾಲ್ಕ್ ಮರ್ವೇ. ಅದ್ರ ಸುತ್ತವೇ ಸುತ್ಕೊಂಡು ಇರ್ಕ್ ಎಲ್ಲಾ. ಜನ್ರು ಒಳ್ಳೆ ಗಾಳಿ ತಕಂಬುಕ್ ಬಪ್ಪುದು ಇಲ್ಲಿಗೆ. ಗೌಜಿ ಮಾಡ್ಕಂಡ್ ಅವ್ರಿವ್ರ ಮನಿ ಕಥೆ ಹೇಳ್ಕಂಡು ಇಪ್ಪುದು ಇಲ್ಲೇ, ಜಡ್ಡು ಆಪುಕಾಗ ಅಂದ್ವೇಳಿ ನಾನಾ ನಮ್ನಿ ವ್ಯಾಯಾಮ ಮಾಡೂಕ್ ಬಪ್ಪುದು ಇಲ್ಲೇ. ಅದಕ್ಕಂತಾನೇ ನಮೂನಿ ನಮೂನಿ ಮಿಷಿನ್ ಇಥ್ ಕಾಣಿ. ಅದ್ರ್ ಮೇಲೆ ಕೂತ್ಕಂಡ್ ಬ್ಯಾಡದಿದ್ ಪಂಚಾಯ್ತಿಗಿ ಮಾಡ್ತ್ರ್. ನಾ ಕಾಂಬತಿಗೆಲ್ಲ ಉಸು ಉಸು ಅಂದ್ಕಂಡ್ ಶ್ವಾಸ ಬಿಡ್ತಾ; ಒಂದೋ ಅತ್ತಿ, ಸೊಸಿದ್ ದೂರ್ ಹೇಳ್ತ್ರ್ ಇಲ್ಲಾ, ಸೊಸಿ ಅತ್ತಿದ್ ದೂರ್ ಹೇಳ್ತ್ರ್. ಇಲ್ಲಿರೆ ಗಂಡಸರ್ರೆಲ್ಲ ದೇಶ ಎಂಥ್ಕಂದೇಳಿ ಹಿಂಗಾಯ್ತ್, ಎಂಥ ಮಾಡ್ರೆ ಸರಿ ಹೋತ್ ಅಂಬುದ್ರ ಬಗ್ಗಿಯೇ ಮಾತ್ಕತಿ ಮಾಡ್ತಿತ್ರ್..

ಆರ್ಗಂಟಿ ಆಪುಕಿಲ್ಲ ಬಡಾವಣೆಯಲ್ಲಿದ್ ಮಕ್ಳೆಲ್ಲ ಬಂದ್ ಹಾಜರಾಕ್ಕೂದು ಇಲ್ಲೇ, ಪಾಪಾ ಅವ್ಕಾರೂ ಎಲ್ಲಿತ್ ಜಾಗ. ಮನಿಯೂ ಸಿಮೆಂಟೂ, ರಸ್ತಿಯೂ ಸಿಮೆಂಟ್, ಮಣ್ಣ್ ಏನಾರೂ ಕಾಣ್ಕಂದ್ರೆ ಇಲ್ಲಿಗೆ ಬರ್ಕ್ ಅಲ್ದಾ..ನನ್ನ ಮೂರು ವರ್ಷದ ಮೊಮ್ಮಗನ್ ಕರ್ಕಂಡ್ ಆಗಾಗ ಇಲ್ಲಿಗೆ ಹೋಪುದು. ಅವ್ಕೊಂತರಾ ಮನಿಯೆಲ್ಲ ಜೈಲೇ ಪಾಪಾ. ಹಂಗಾಯಿ ಅವೆಲ್ಲ ಒಟ್ಟಾಯಿ ಇಲ್ ಸೇರ್ತೂರ್. ಪಾಪ ಮಕ್ಕಳಲಾ, ಸೇರ್ತೋರ್ ಅಲಾ ಅಂದ್ಕಂಡ್ ಜನ ಸುಮ್ನಿಪ್ಪುದು ಕಡ್ಮಿಯೇ. ಮಕ್ಕಳ್ ಅಲ್ದಾ ಗೌಜಿ ಆತ್. ಅಷ್ಟಕ್ಕೆ ದೊಡ್ಡ್ ಮನ್ಶ್ಯೇರೆಲ್ಲ ಕಣ್ಣಲ್ ಪಸಿ ಇಲ್ದಂಗ್ ಆಡ್ತ್ರ 'ಎಂಥ ನಿಮ್ದು ಗಲಾಟೆ. ಮನೆಗೆ ಹೋಗಿ' ಅಂದ್ವೇಳಿ ಜೋರ್ ಮಾಡೂಕೆ ಶುರು ಮಾಡ್ತ್ರ್. ಅವ್ ಕಡಿಗಿ ಒಟ್ ಮನಿ ಸೇರ್ಕಂತೋ.

ಹಿಂಗ್ ನನ್ನಬ್ಬಿ ನಮ್ಮನಿ ಎದ್ರ್ ಬಿಸಾರ ಇದ್ ಆರು ಗೆದ್ದಿ ಆಪೊಷ್ಟು ಅಗ್ಲ ಉದ್ದ ಇದ್ದ ಪಾರ್ಕ್ ಕಂಡ್ಕಂಡ್ ಸ್ವಲ್ಪ ಊರ್ ಮನಿನಾ ಜಾನ್ಸ್ಕಂಡ್ ಹೇಳ್ತಿದ್ರೆ... ಬೆಂಗ್ಳೂರಿನ ಪಿರಿಪಿರಿ ಮಳಿಯಂಗೂ ಮನ್ಸ್ ಮತ್ ಮತ್ ಊರ ಮನಿ ಬದಿಗೆ ಹೋತ್.

ಕುಂದಾಪ್ರ ಅಂದ್ ಕೂಡಲೇ ಎಲ್ಲೇ ಇರ್ಲಿ,

